

# ಟೆಸ್ಲಾ ಒಡೆಯನ ಕೈಯಲ್ಲಿ ಟ್ವಿಟರ್!

**ಹೊಸ ಸೋಷಿಯಲ್ ಮೀಡಿಯಾ ಪ್ಲಾಟ್‌ಫಾರ್ಮ್ ಹುಟ್ಟುಹಾಕುವ ಸುಳಿವು ನೀಡಿದ್ದ ಟೆಸ್ಲಾ ಕಂಪನಿಯ ಒಡೆಯ ಎಲಾನ್ ಮಸ್ಕ್, ಈಚೆಗೆ ಟ್ವಿಟರ್ ಕಂಪನಿಯನ್ನೇ ತಮ್ಮ ತೆಕ್ಕೆಗೆ ತೆಗೆದುಕೊಂಡಿದ್ದಾರೆ.**

**■ ಶಶಿಕುಮಾರ್ ಸಿ.**

ಸೋಷಿಯಲ್ ಮೀಡಿಯಾ ಪ್ಲಾಟ್‌ಫಾರ್ಮ್‌ಗಳಲ್ಲಿ ಅತ್ಯಂತ ಪ್ರಭಾವಶಾಲಿ ಎನಿಸಿರುವ 'ಟ್ವಿಟರ್' ಕಂಪನಿಯನ್ನು 'ಟೆಸ್ಲಾ' ಕಾರು ಕಂಪನಿಯ ಒಡೆಯ ಎಲಾನ್ ಮಸ್ಕ್ ಅವರು ಖರೀದಿಸಿದ್ದು, ಸದ್ಯ ಈ ಖರೀದಿ ಟ್ವಿಟರ್ ಸೇರಿದಂತೆ ಎಲ್ಲೆಡೆ ಟ್ರೆಂಡಿಂಗ್‌ನಲ್ಲಿದೆ. ಬರೋಬ್ಬರಿ 44 ಬಿಲಿಯನ್ ಡಾಲರ್‌ಗೆ (ಸುಮಾರು ₹3.36 ಲಕ್ಷ ಕೋಟಿ) ಟ್ವಿಟರ್ ಕಂಪನಿಯ ಎಲ್ಲ ಷೇರುಗಳನ್ನು ಎಲಾನ್ ತಮ್ಮದಾಗಿಸಿಕೊಂಡಿದ್ದಾರೆ.

ಅಭಿವ್ಯಕ್ತಿ ಸ್ವಾತಂತ್ರ್ಯದ ಬಗೆಗಿನ ಟ್ವಿಟರ್‌ನ ನಿಲುವುಗಳ ಕುರಿತು ಆಕ್ಷೇಪ ಹೊರಹಾಕಿದ್ದ ಎಲಾನ್ ಮಸ್ಕ್, ಹೊಸ ಸೋಷಿಯಲ್ ಮೀಡಿಯಾ ಪ್ಲಾಟ್‌ಫಾರ್ಮ್ ಹುಟ್ಟುಹಾಕುವ ಸುಳಿವು ನೀಡಿದ್ದರು. ಬದಲಾದ ಬೆಳವಣಿಗೆಯಲ್ಲಿ ಹೊಸ ಸೋಷಿಯಲ್ ಮೀಡಿಯಾ ಪ್ಲಾಟ್‌ಫಾರ್ಮ್ ಬದಲು, ವಿಶ್ವದ ಪ್ರಭಾವಶಾಲಿ ಸೋಷಿಯಲ್ ಮೀಡಿಯಾ ಆಗಿದ್ದ ಟ್ವಿಟರ್ ಕಂಪನಿಯನ್ನೇ ಖರೀದಿಸಿರುವುದು ಆಶ್ಚರ್ಯಕರ ಬೆಳವಣಿಗೆ.

'ಅಭಿವ್ಯಕ್ತಿ ಸ್ವಾತಂತ್ರ್ಯವೆನ್ನುವುದು ಪ್ರಜಾಪ್ರಭುತ್ವದಲ್ಲಿ ಮಹತ್ವದ್ದು ಮತ್ತು ಟ್ವಿಟರ್, ಇಂದಿನ ಡಿಜಿಟಲ್ ಯುಗದಲ್ಲಿ ಅದಕ್ಕೆ ಪ್ರಮುಖ ವೇದಿಕೆಯಾಗಿ ಕಾರ್ಯನಿರ್ವಹಿಸಬೇಕಿದೆ' ಎಂದು ಎಲಾನ್ ಹೇಳಿದ್ದರು. ತಮ್ಮ ಹಿಂದಿನ ಹೇಳಿಕೆಯಂತೆ, 'ಟ್ವಿಟರ್‌ನ ಸ್ವರೂಪ ಬದಲಾಗಬೇಕು' ಎಂಬ ಅವರ ಇಂಗಿತ ಕಾರ್ಯರೂಪಕ್ಕೆ ಬರಲು ಈ ಖರೀದಿ ವಹಿವಾಟು ಮುನ್ನುಡಿ ಬರೆದಂತಿದೆ.

ಈ ಹಿಂದೆಯೇ, ಟ್ವಿಟರ್‌ನ ಒಟ್ಟು ಷೇರುಗಳ ಪೈಕಿ ಶೇ. 9.2ರಷ್ಟು ಪಾಲನ್ನು ಎಲಾನ್ ಮಸ್ಕ್ ಹೊಂದಿದ್ದರು. ಈಗ ಪ್ರತಿ ಷೇರಿಗೆ 54.20 ಡಾಲರ್‌ನಂತೆ (₹4149) ಪಾವತಿಸಿ, ಪೂರ್ತಿ ಪಾಲು ಖರೀದಿಗೆ ಇಂಗಿತ ವ್ಯಕ್ತಪಡಿಸಿದ್ದರು. ಎಲಾನ್ ಪ್ರಸ್ತಾಪಕ್ಕೆ ಟ್ವಿಟರ್ ಆಡಳಿತ ಮಂಡಳಿ ಒಪ್ಪಿದ್ದು, ಹಲವು ದಿನಗಳಿಂದ ನಡೆಯುತ್ತಿದ್ದ ತೆರೆಮರೆಯ ಖರೀದಿ ಮಾತುಕತೆಗೆ ಅಂತಿಮ ಮುದ್ರೆ ಬಿದ್ದಿದೆ. ಎಲಾನ್ ಅವರ ಖರೀದಿ ಪ್ರಸ್ತಾಪದ ನಂತರ ಟ್ವಿಟರ್ ಷೇರು ಬೆಲೆ ಹಲವು ಬಾರಿ ಏರಿಕೆಯಾಗಿದೆ.

ಪಕ್ಕಾ ಸೋಷಿಯಲ್ ಮೀಡಿಯಾ ಪ್ಲಾಟ್‌ಫಾರ್ಮ್ ಆಗಿ ದೃಢವಾಗಿ ರೂಪುಗೊಂಡಿದ್ದ ಟ್ವಿಟರ್ ಕಂಪನಿಯು 2013ರಿಂದ ಸಾರ್ವಜನಿಕ ಷೇರು ಮಾರುಕಟ್ಟೆ ಪ್ರವೇಶಿಸುವ ಮೂಲಕ ಹೂಡಿಕೆ ಕಂಪನಿಯಾಗಿ ಬದಲಾಗಿತ್ತು. ಆದರೆ ಈಗ ಪೂರ್ತಿ ಷೇರು ಮಾರಾಟವಾಗಿ, ಎಲಾನ್ ಮಸ್ಕ್ ತೆಕ್ಕೆಗೆ ಬಂದಿರುವುದರಿಂದ, ಹಿಂದಿನಂತೆ ಖಾಸಗಿ ಕಂಪನಿಯಾಗಿ ಮುಂದುವರಿಯುವ ಸಾಧ್ಯತೆ ಇದೆ. ಏಪ್ರಿಲ್ 14ರಂದು ಟ್ವಿಟರ್ ಖರೀದಿಯ ಪ್ರಸ್ತಾಪ ಮಾಡಿದ್ದ ಎಲಾನ್ ಮಸ್ಕ್, ತಾನು ಅಧಿಕ ಷೇರು ಪಾಲು ಹೊಂದಿದ್ದರೂ ಕಂಪನಿಯ ಆಡಳಿತ ಮಂಡಳಿ ಸೇರುವ ಆಹ್ವಾನವನ್ನು ತಿರಸ್ಕರಿಸಿದ್ದರು.

ಟ್ವಿಟರ್ ಖರೀದಿಯ ನಂತರ ಟ್ವೀಟ್ ಮಾಡಿರುವ ಎಲಾನ್, 'ನನ್ನನ್ನು ಅತಿಯಾಗಿ ಟೀಕಿಸುವವರೂ ಟ್ವಿಟರ್‌ನಲ್ಲಿಯೇ ಉಳಿಯಲಿದ್ದಾರೆ ಎಂದು ಭಾವಿಸುತ್ತೇನೆ. ಅಭಿವ್ಯಕ್ತಿ ಸ್ವಾತಂತ್ರ್ಯವೆಂದರೆ ಅದೇ ತಾನೆ' ಎಂದಿದ್ದಾರೆ. ಎಲಾನ್ ಅವರ ಉದ್ಯಮ ಮತ್ತು ವ್ಯಾಪಾರ ನೀತಿಯನ್ನು ಹಲವರು ಟ್ವಿಟರ್‌ನಲ್ಲಿ ಟೀಕಿಸುತ್ತಲೇ ಬಂದಿದ್ದಾರೆ. ಹೀಗಾಗಿಯೇ ತನ್ನ ಟೀಕಾಕಾರರೂ ಟ್ವಿಟರ್‌ನಲ್ಲೇ ಇರಲಿ ಎಂಬರ್ಥದ ಮಾತು ಅವರದ್ದು.

## ಪರಾಗ್‌ಗೆ ಜಾಕ್‌ಪಾಟ್!

ಟ್ವಿಟರ್ ಮಾಲಿಕತ್ವ ನಿಯಂತ್ರಣ ಬದಲಾವಣೆಗೊಂಡ 12 ತಿಂಗಳೊಳಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನು (ಸಿಇಒ) ವಜಾಗೊಳಿಸಿದರೆ ಅದಕ್ಕೆ ಪ್ರತಿಯಾಗಿ ಕಂಪನಿಯು 42 ದಶಲಕ್ಷ ಡಾಲರ್ ಅಂದರೆ ₹321 ಕೋಟಿಯನ್ನು ನೀಡಬೇಕು!.

ಕಂಪನಿಯ ಸದ್ಯದ ಸಿಇಒ ಭಾರತೀಯ ಮೂಲದ ಪರಾಗ್ ಅಗರ್‌ವಾಲ್. 'ಎಲಾನ್ ಮಸ್ಕ್ ತೆಕ್ಕೆಯಲ್ಲಿರುವ ಟ್ವಿಟರ್ ಪರಾಗ್ ಅವರನ್ನೇನಾದರೂ ಸಿಇಒ ಸ್ಥಾನದಿಂದ ವಜಾಗೊಳಿಸಿದರೆ ₹321 ಕೋಟಿಯನ್ನು ಅವರಿಗೆ ನೀಡಬೇಕಾಗುತ್ತದೆ' ಎಂದು ಸಂಶೋಧನಾ ಸಂಸ್ಥೆ 'ಈಕ್ವಿಲರ್' ತಿಳಿಸಿದೆ. ಅಗರವಾಲ್ ಅವರ ಮೂಲ ವೇತನ, ಎಲ್ಲಾ ಇಕ್ವಿಟಿ ಪಾವತಿ, ಹಲವು ಬಾಬ್ತುಗಳನ್ನು ಸೇರಿಸಿ ಅಂದಾಜು ಮಾಡಿರುವ ಈಕ್ವಿಲರ್ ವಕ್ತಾರರು ಈ ಅಂಶವನ್ನು ಹೊರಹಾಕಿದ್ದಾರೆ. ಈ ಬಗ್ಗೆ ಪ್ರತಿಕ್ರಿಯೆಗೆ ಟ್ವಿಟರ್ ಪ್ರತಿನಿಧಿಗಳು ನಿರಾಕರಿಸಿದ್ದಾರೆ.

## ಟ್ರಂಪ್‌ಗೆ ಸಿಗಬಹುದೇ ಮುಕ್ತಿ!

ಪ್ರಚೋದನಾತ್ಮಕ ಹೇಳಿಕೆಯ ಕಾರಣಕ್ಕೆ ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಟ್ವಿಟರ್ ಖಾತೆಗೆ ಶಾಶ್ವತವಾಗಿ ನಿರ್ಬಂಧ ಹೇರಲಾಗಿದೆ. ಆದರೆ, ಎಲಾನ್ ಮಸ್ಕ್ ಟ್ವಿಟರ್ ಅನ್ನು ಖರೀದಿಸಿದ ಬೆನ್ನಲ್ಲೇ ಟ್ರಂಪ್ ಟ್ವಿಟರ್ ಖಾತೆಯ ಮೇಲಿನ ನಿರ್ಬಂಧವನ್ನು ತೆರವಿಗೆ ಇದು ಸಕಾಲ ಎಂಬ ಅಭಿಪ್ರಾಯಗಳನ್ನು ಹಲವರು ವ್ಯಕ್ತಪಡಿಸುತ್ತಿದ್ದಾರೆ.

ರಿಪಬ್ಲಿಕ್ ಪಕ್ಷವು 209 ಸಂಸದರನ್ನು ಒಳಗೊಂಡಿದ್ದು, 'ಹೌಸ್ ರಿಪಬ್ಲಿಕನ್ಸ್' ಎಂಬ ಟ್ವಿಟರ್ ಖಾತೆಯನ್ನು ಆ ಪಕ್ಷ ನಿರ್ವಹಿಸುತ್ತಿದೆ. 'ಹೌಸ್ ರಿಪಬ್ಲಿಕನ್ಸ್', 'ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮೇಲಿನ ಟ್ವಿಟರ್ ನಿರ್ಬಂಧವನ್ನು ಮುಕ್ತಗೊಳಿಸಲು ಇದು ಸಕಾಲ' ಎಂದು ಡೊನಾಲ್ಡ್ ಟ್ರಂಪ್ ಅವರ ಹೆಸರನ್ನು ಪ್ರಸ್ತಾಪಿಸಿ ಹಾಗೂ ಎಲಾನ್ ಮಸ್ಕ್ ಅವರನ್ನು ಟ್ಯಾಗ್ ಮಾಡಿ ಟ್ವೀಟ್ ಮಾಡಿದೆ. ಅದರ ಬೆನ್ನಲ್ಲೇ ರಿಪಬ್ಲಿಕನ್ ಪಕ್ಷದ ಹಲವಾರು ಸಂಸದರು 'ಡೊನಾಲ್ಡ್ ಟ್ರಂಪ್ ಅವರನ್ನು ಮುಕ್ತಗೊಳಿಸಲು ಇದು ಸೂಕ್ತ ಸಮಯ' ಎಂದು ಅಭಿಪ್ರಾಯಪಟ್ಟಿದ್ದಾರೆ.

ಅಂತೆಯೇ ಕೋವಿಡ್–19 ಕುರಿತು ತಪ್ಪು ಮಾಹಿತಿಗಳನ್ನು ಹಂಚಿಕೊಂಡ ಕಾರಣದಿಂದ ಶಾಶ್ವತವಾಗಿ ಟ್ವಿಟರ್‌ನಿಂದ ನಿರ್ಬಂಧಕ್ಕೆ ಒಳಗಾಗಿರುವ ಸಂಸದೆ ಮಾರ್ಜೊರಿ ಟೇಲರ್ ಗ್ರೀನ್, ಮತ್ತೆ ತಮ್ಮ ಟ್ವಿಟರ್ ಖಾತೆಯನ್ನು ಸಕ್ರಿಯಗೊಳಿಸುವ ಇಚ್ಛೆ ವ್ಯಕ್ತಪಡಿಸಿದ್ದಾರೆ. 'ಪ್ರಸ್ತುತ ಜಾರಿಯಲ್ಲಿರುವ ನಿಯಮಗಳು, ಅವುಗಳ ಉಲ್ಲಂಘನೆಗೆ ತಕ್ಕಂತೆ ಸೂಕ್ತ ಕ್ರಮ ಕೈಗೊಳ್ಳುವುದನ್ನು ಉಳಿಸಿಕೊಳ್ಳಬೇಕು. ಕೆಟ್ಟದಾಗುವುದನ್ನು ತಡೆಯಲು ಟ್ವಿಟರ್ ಮಂಡಳಿಗೆ ಇನ್ನೂ ಸಮಯವಿದೆ' ಎಂದು ಸರ್ಕಾರೇತರ ಸಂಘದ ಮುಖ್ಯಸ್ಥರಾದ ಏಂಜೆಲೊ ಅಭಿಪ್ರಾಯ ಪಟ್ಟಿದ್ದಾರೆ. ■